ತೋಟದಲ್ಲಿ, ಬಂಡೆ ಬಡೂಲೇ ಗುಳಿ ತೋಡಿ ಮಣ್ಣು ಮಾಡು ಅಂತಂದಿದ್ದರು...' ಅಂತನ್ನುವಾಗ, ಕೊರಳುಗಟ್ಟಿ ಬಂದು, ಹುಚ್ಚು ಗದ್ಗದದ ನಡುವೆ ಒಂದೇ ಸಮ ಬಿಕ್ಕಿದ.

'ಹಾಗೆಲ್ಲ ಮಾಡಲಿಕ್ಕಾಗಲ್ಲ, ಶರಣಪ್ಪ... ದಿಸೀಸ್ ನಾಟ್ ಎ ನ್ಯಾಚುರಲ್ ಡೆತ್... ಸ್ವಾಭಾವಿಕವಾದ ಸಾವಲ್ಲ ಇದು... ಪೊಲೀಸರಿಗೆ ತಿಳಿಸಲೇಬೇಕು... ಇಲ್ಲದಿದ್ದರೆ, ನಿಮ್ಮ ಜೊತೆ ನಾವಿಬ್ಬರೂ ಕಂಬಿ ಎಣಿಸೋದಾಗುತ್ತೆ...' ರೇಣು, ನಾಡಿನ ವ್ಯವಸ್ಥೆ ಮತ್ತು ಅದಕ್ಕೆ ಬದ್ಧವಾದ ವ್ಯವಹಾರದ ಕುರಿತಾಗಿ ಆಡಿದಳು. 'ಅರ್ಧ ಗಂಟೇಲಿ ಬಂದು ಬಿಡುತೀವಿ... ಈಗ ಎಂಟೂವರೆ ಅಲ್ಲವಾ? ಅಬ್ಬಬ್ಬಾ ಅಂದರೆ ಒಂಬತ್ತೂವರೆ ಹತ್ತಕ್ಕೆಲ್ಲ ಇಲ್ಲಿರುತೀವಿ... ನೀವು ಗುಂಡಿ ತೋಡುವ ವ್ಯವಸ್ಥೆ ಮಾಡಿಕೊಳ್ಳಿ...' ಅಂತಂದಳು.

ಈ ಪಾಟಿ ಚಾಣಾಕ್ಷ ಹೆಂಡತಿಯೆದುರು ರುದ್ರನೀಲ ಥಾಪಸೆ, ಯಾವೊತ್ತಿಗೂ ಪೆದ್ದನೇ ಸರಿ. ಏನೂ ಮಾತನಾಡದೆ ಸುಮ್ಮಗುಳಿದ. ಅವನ ಮನಸ್ಸು, ಡೇವಿಡ್ ಹ್ಯೂಸ್‌ನ ಮಗ 'ಫಕ್ಕಿಟ್ಸ್' ಅಂದುದರ ಸುತ್ತಲೇ ಗಿರಕಿಹೊಡೆಯುತ್ತಿತ್ತು. ಗರ ಬಡಿದವನಂತಾಗಿದ್ದ. ಹಿಂದಾನೊಮ್ಮೆ, ಈತನೂ ತನ್ನ ಕುಟುಂಬದವರ ಕುರಿತು ಕೇಳುವಾಗ, 'ಫಕ್ ದೆಮ್!!' ಅಂದಿದ್ದನಲ್ಲವೆ? ಛೇ... ರುದ್ರನೀಲ ಥಾಪಸೆಗೆ ಇವೆಲ್ಲವೂ ಮತ್ತೆ ಮತ್ತೆ ಮರುಕಳಿಸಿ, ಮರ್ತ್ಯದ ಸಂಬಂಧವಾದರೂ ಇಷ್ಟು ಶಿಥಿಲವೇ ಅಂತನ್ನಿಸಿ ತೋರಿತು. ಪ್ರಶ್ನೆಯಾಗಿ ಕಾಡಿತು. ಒಲ್ಲೆಂದರೂ, ಇಂದ್ರನೀಲನ ನೆನಪಾಗಿ ಮುಂದೆ ತಾನು ಸತ್ತರೂ, ಮಗನಾದವನು ಹೀಗೇ ಆಡಬಹುದಲ್ಲವೇ ಅಂತನಿಸಿ ತೋರಿದ್ದೇ, ಮನಸ್ಸು ಮುಗ್ಗರಿಸಿತು.

ನೆಲಮಂಗಲದ ದಾರಿಯಲ್ಲಿ, 'ಬಡಾನೀಲ್... ಅದೇನೋ ಆಮೇಲೆ ಹೇಳುತೀನಿ ಅಂದೆಯಲ್ಲ ಅದೇನು ವಿಷಯ?' ಅಂತಂದು ಕೇಳಿದಳು. ರುದ್ರನೀಲ ಥಾಪಸೆ, ರಾತ್ರಿ ಬರೆದ ಪದ್ಯವನ್ನು ಉದ್ಧರಿಸಿಕೊಂಡು ಮಾತು ಸುರು ಹಚ್ಚಿದ. 'ಇದಕ್ಕೇನು ಹೇಳೋದು, ರೇ... ಆಶ್ಚರ್ಯ ಆಗುತ್ತಲ್ಲವಾ?' ಎಂದು ಕೇಳಿದ.

'ಬಡಾನೀಲ್... ನನಗೆ ಈ ದೇಜಾವೂಗೀಜಾವೂ ಎಲ್ಲ ನಂಬಬೇಕು ಅನಿಸಲ್ಲ... ಇವೆಲ್ಲ ಭಾವುಕ ಮನಸ್ಸಿನ ಹುಚ್ಚು ಹೊಯ್ದಾಟ ಅಷ್ಟೆ. ಲೆಟ್ಸ್ ಬಿ ಪ್ರ್ಯಾಕ್ಟಿಕಲ್... ನಾಳೆ ನಮ್ಮ ಛೋಟೂನೀಲ್ ಕೂಡ ನಮಗೆ ಹೀಗೇ ಮಾಡಬಹುದು... ಏನು ಮಾಡೋದಿಕ್ಕಾಗುತ್ತೆ? ಇವೊತ್ತಿನ ಪ್ರಾಪಂಚಿಕತೆ ಇರೋದೇ ಅದರಲ್ಲಿ...' ಎಂದು ಕಾರನ್ನು ವೇಗಯಿಸುತ್ತ ಹೇಳಿದಳು. 'ನಿಜ ಹೇಳಲಾ... ವಾಸ್ತವ ಏನಂದರೆ, ನಾವಿಬ್ಬರೂ ಅರವತ್ತು ದಾಟಿದ್ದಾಯಿತು. ಇನ್ನೆಷ್ಟು ದಿವಸ ಜೊತೆಯಲ್ಲಿರುತೀವೋ ಯಾರಿಗೆ ತಾನೇ ಗೊತ್ತು? ನಮ್ಮ ಸಾವಿನ ಬಳಿಕದ ನಮ್ಮ ದೇಹವ್ಯವಸ್ಥೆಯನ್ನು ನಾವೇ ಮಾಡಿಕೊಂಡಿರಬೇಕು ಅಷ್ಟೆ...'

ಎಲಾ ಹೆಂಡತಿಯೇ... ಅಂತಂದು, ತೀಕ್ಷ್ಣದೃಷ್ಟಿಯನ್ನು ತಾಳಿದ ರುದ್ರನೀಲ ಥಾಪಸೆ ರೇಣುವನ್ನು ಬಲು ದೀರ್ಘವಾಗಿ ನೋಡಿದ. ಆದರೆ ಅವಳ ಮನಸ್ಸಷ್ಟೂ ನೆಲಮಂಗಲದ ಠಾಣೆಯತ್ತಲೇ ನೆರೆದಿತ್ತು.

★★★

ಭಾನುವಾರದ ಆರಾಮವನ್ನೇ ತುಂಬಿಕೊಂಡಿದ್ದ ಠಾಣೆಯಲ್ಲಿ ದೂರು ಕೊಟ್ಟು ಬರುವುದೇ ಒಂದು ಹರಸಾಹಸವಾಗಿ ಏರ್ಪಟ್ಟಿತು. ಹಾಗೂ ಹೀಗೂ, ಸರಕಾರೀ ಪೇದೆಗಳೆದುರು ಕಂಪ್ಲೇಂಟು ನೋಂದಾಯಿಸಿ, ಮೃತವ್ಯಕ್ತಿಗೆ ಯಾರೂ ಹಿಂದುಮುಂದಿಲ್ಲದಿರುವುದರಿಂದ ಮುಂದೇನು ಮಾಡಬೇಕೆಂಬ ಅರಿಕೆಯನ್ನೂ ಇಟ್ಟು, ಇಬ್ಬರೂ ಗ್ರೀನ್‌ಹ್ಯೂಸ್‌ಫಾರ್ಮಿಗೆ